# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಬೆಂಗಳೂರು ಕೇಂದ್ರೀಯ ವಿಭಾಗ : ಬೆಂಗಳೂರು

ಕ್ರಸಂ: ಕರಾಸಾ/ಬೆಂ.ಕೇ.ವಿ/ಸಂ/ವಾಣಿಜ್ಯ/ 2028 /16-17 ದಿನಾಂಕ: 08-12-2016

## " ಇ-ಟೆಂಡರ್ ಪ್ರಕಟಣೆ ಸಂಖ್ಯೆ / 08 /2016 "
## (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗದ ನೆಲಮಂಗಲ ಬಸ್ ನಿಲ್ದಾಣದ ಮುಖ್ಯ ಕಟ್ಟಡದಲ್ಲಿರುವ ಮಳಿಗೆ ಸಂಖ್ಯೆ-01 ರ ಪರವಾನಗೆ ಅವಧಿಯು ದಿನಾಂಕ: 05-03-2017ಕ್ಕೆ ಹಾಗೂ ಸದರಿ ಬಸ್ ನಿಲ್ದಾಣದ ವಾಣಿಜ್ಯ ಸಂಕೀರ್ಣದಲ್ಲಿರುವ ಮಳಿಗೆ ಸಂಖ್ಯೆ: 10 ರ ಪರವಾನಿಗೆ ಅವಧಿ ದಿನಾಂಕ: 28-02-2017ಕ್ಕೆ ಮುಗಿಯುತ್ತದೆ. ಸದರಿ ಮಳಿಗೆಗಳಲ್ಲಿ ಜನರಲ್ ಸ್ಟೋರ್ ವ್ಯಾಪಾರ ಮಾಡಲು ಇ-ಟೆಂಡರ್ ಮುಖಾಂತರ ಸಂಸ್ಥೆಯ ನಿಯಮಗಳ ಪ್ರಕಾರ 05 ವರ್ಷಗಳ ಅವಧಿಗೆ ಪರವಾನಿಗೆದಾರರನ್ನು ಆಯ್ಕೆಮಾಡಲು ದಿನಾಂಕ:30-12-2016 ರಂದು ಇ-ಟೆಂಡರ್ ನಡೆಸಲು ನಿಗದಿಪಡಿಸಲಾಗಿದೆ. ಆಸಕ್ತಿಯುಳ್ಳವರು ಅರ್ಜಿಗಳನ್ನು / ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.eproc.Karnataka.gov.in ಮುಖಾಂತರ ದಿನಾಂಕ: 10-12-2016 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ಗೆ ಇ.ಎಂ.ಡಿ ಮೊತ್ತವನ್ನು ಪಾವತಿಸಿರುವ ಬಗ್ಗೆ ಹಾಗೂ ಸಂಬಂಧಪಟ್ಟ ದಾಖಲಾತಿಗಳನ್ನು ಅರ್ಜಿಯೊಂದಿಗೆ ದಿನಾಂಕ:29-12-2016 ರಂದು 16.00 ಗಂಟೆಯವರೆಗೆ ಸಲ್ಲಿಸಬಹುದು. ದಿನಾಂಕ:30-12-2016 ರಂದು 16.00 ಗಂಟೆಗೆ ಇ-ಟೆಂಡರ್ ತೆರೆಯಲಾಗುವುದು. ಸದರಿ ಸಮಯದಲ್ಲಿ ಅರ್ಜಿದಾರರು ಹಾಜರಿರಲು ಕೋರಲಾಗಿದೆ.

| ಕ್ರ.ಸಂ. | ಮಳಿಗೆಯ ವಿವರಗಳು | ವಿಸ್ತೀರ್ಣ | ಮಾಸಿಕ ಶುಲ್ಕ | ಇ.ಎಂ.ಡಿ ಮೊತ್ತ | ಮೀಸಲಾತಿಯ ವಿವರ |
|---|---|---|---|---|---|
| 1 | ಮಳಿಗೆ ಸಂಖ್ಯೆ-10 (ವಾ.ಸಂಕೀರ್ಣ) | 118 (ಚ.ಅ.ಗಳಲ್ಲಿ) | ರೂ.33,094-00 | ರೂ. 99,282-00 | ಸಾಮಾನ್ಯ ವರ್ಗ |
| 2 | ಮಳಿಗೆ ಸಂಖ್ಯೆ-01 (ಮುಖ್ಯ ಕಟ್ಟಡ) | 112 (ಚ.ಅ.ಗಳಲ್ಲಿ | ರೂ.16,106-00 | ರೂ. 48,318-00 | ಸಾಮಾನ್ಯ ವರ್ಗ |

ಮೇಲೆ ತಿಳಿಸಿರುವ ಮಳಿಗೆಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಇ-ಟೆಂಡರ್‌ಗೆ ಅರ್ಜಿ ಸಲ್ಲಿಸುವವರು ಅರ್ಜಿ ಶುಲ್ಕ ಮತ್ತು ಇ.ಎಂ.ಡಿ ಮೊತ್ತವನ್ನು ಆನ್‌ಲೈನ್ ಮೂಲಕ ಪಾವತಿಸಬೇಕಾಗಿರುತ್ತದೆ. **ಸಲ್ಲಿಸಿರುವ ಅರ್ಜಿಗಳು ಸಂಸ್ಥೆಯ ಷರತ್ತು ಮತ್ತು ನಿಬಂಧನೆಗಳ ಪ್ರಕಾರ ಅಪೂರ್ಣವಾಗಿದ್ದಲ್ಲಿ ತಿರಸ್ಕರಿಸಲಾಗುವುದು. ಯಾವುದೇ ಕಾರಣ ನೀಡದೇ ಇ-ಟೆಂಡರ್ ನಡೆಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.** ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗ, ಶಾಂತಿನಗರ, ಬೆಂಗಳೂರು-560027 ರಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. (ಸಹಾಯಕ ಸಂಚಾರ ವ್ಯವಸ್ಥಾಪಕರು ದೂ. ಸಂ. 7760990029 & ಸಹಾಯಕ ಸಂಚಾರ ಅಧೀಕ್ಷಕರು-7760990261).

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ.
ಕ.ರಾ.ರ.ಸಾ. ನಿಗಮ,
ಬೆಂಗಳೂರು ಕೇಂದ್ರೀಯ ವಿಭಾಗ.
ಬೆಂಗಳೂರು.